## 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

## ಬೆಂಗಳೂರು ನಗರ.

## ಸಿಸಿ. 7766/2014

**ಚಾಸಾ- 4 ಪ್ರಾಸಾ- 4**

| | |
|---|---|
| **ಸಾಕ್ಷಿದಾರರ ಹೆಸರು** | ರಘುಕುಮಾರ್ |
| **ತಂದೆಯ ಹೆಸರು** | ಕೃಷ್ಣಪ್ಪ |
| **ವಯಸ್ಸು** | 36 ವರ್ಷ |
| **ಉದ್ಯೋಗ** | ವ್ಯಾಪಾರ |
| **ವಾಸ** | ತಲ್ಲಘಟ್ಟಪುರ |
| **ಪ್ರಮಾಣೀಕರಿಸಿದ ದಿನಾಂಕ** | 02.03.2024 |

**ಮುಖ್ಯ ವಿಚಾರಣೆ : ಶ್ರೀ.ಎಂ.ಬಿ.ಆರ್. ವಿಶೇಷ ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪಾರ್ವತಿ ಮತ್ತು ಭಸ್ಕರ್ ಇರುತ್ತಾರೆ ಅವರ ಪರಿಚಯ ನನಗೆ ಇರುತ್ತದೆ. ನಾನು 2009 ರಿಂದ 2023 ರವರೆಗೆ ಮ್ಯಾಕ್ಸ್ ಮೋಟಾರ್ಸ್ ನಲ್ಲಿ ಸೇಲ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡಿದ್ದೇನೆ. ನಮ್ಮ ಕಂಪನಿ ಡಾ.ರಾಜ್ ಕುಮಾರ್ ರಸ್ತೆ, ರಾಜಾಜಿನಗದರಲ್ಲಿರುತ್ತದೆ. ನಾನು ಕಲೆಕ್ಷನ್ ಆಗಿರುವ ಹಣವನ್ನು ಬ್ಯಾಂಕ್ ಗೆ ಕಟ್ಟಿ ಬರಲು ಒಂದನೇ ಆರೋಪಿ ಕಳುಹಿಸುತ್ತಿದ್ದರು. ಮೊದಲು ಎಸ್ ಬಿ ಐ ಬ್ಯಾಂಕಿಗೆ ಹಣ ತುಂಬಲು ಕಳುಹಿಸುತ್ತಿದ್ದರು. ಕೆಲವು ಸಲ ಹೆಚ್ ಡಿ ಎಫ್ ಸಿ ಬ್ಯಾಂಕಿಗೆ ಕಳುಹಿಸುತ್ತಿದ್ದರು. ಹಣವನ್ನು ಬ್ಯಾಗ್ ನಲ್ಲಿ ಹಾಕಿ ಚೆಲನ್ ನೊಂದಿಗೆ ಕೊಡುತ್ತಿದ್ದರು. ಹಣ ತುಂಬಿ ಚೆಲನ್ ತಂದು ಒಂದನೇ ಆರೋಪಿಗೆ ಕೊಡುತ್ತಿದ್ದೆ.

2. ಸದರಿ ಕಂಪನಿಯಲ್ಲಿ ಒಂದನೇ ಆರೋಪಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದರು. ದಿ.14.09.2011 ರಂದು ಚಾಸಾ-1 ಅವಿಜಿತ್ ರವರು ನನಗೆ ರೂ.1,61,00,000/- ಹಣ ದುರುಪಯೋಗ ಆಗಿರುತ್ತದೆ ಎಂದು ತಿಳಿಸಿದರು. ಆ ಕುರಿತು ಚಾಸಾ-1 ರವರು ದಿ.13 ನೇ ತಾರೀಖು ದೂರು ನೀಡಿರುವುದಾಗಿ ತಿಳಿಸಿದರು. ಈ ಕುರಿತು ಪೊಲೀಸರು ಅಕ್ಟೋಬರ್ 18 ನೇ ತಾರೀಖು ನನ್ನನ್ನು ಕರೆದು ವಿಚಾರಣೆ ಮಾಡಿದ್ದರು. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಈ ಘಟನೆಯಾದ ನಂತರ ಒಂದನೇ ಆರೋಪಿ ನಮ್ಮ ಕಂಪನಿಯಲ್ಲಿ ಇರಲಿಲ್ಲ. ಎರಡನೇ ಆರೋಪಿ

ಇದ್ದರು ಆದರೆ ಎಲ್ಲಿಯವರೆಗೆ ಇದ್ದರು ಎಂದು ದಿನಾಂಕ ನನಗೆ ನೆನಪಿಲ್ಲ. ಒಟ್ಟು ರೂ.2,24,00,000/- ಹಣ ದುರುಪಯೋಗ ಆಗಿರುತ್ತದೆ ಎಂದು ಅಡಿಟ್ ಆದ ನಂತರ ತಿಳಿಸಿದ್ದರು.

**ಪಾಟೀ ಸವಾಲು : ಶ್ರೀ. ಎಸ್ ಆರ್ ಎನ್ ವಕೀಲರಿಂದ ಒಂದನೇ ಆರೋಪಿ ಪರ**

ನನ್ನನ್ನು ಭಸ್ಕರ್ ಎನ್ನುವವರು ನೇಮಕಾತಿ ಮಾಡಿಕೊಂಡಿರುತ್ತಾರೆ. ನನ್ನನ್ನು ನೇಮಕಾತಿ ಮಾಡಿಕೊಂಡಿರುವುದಕ್ಕೆ ನೇಮಕಾತಿ ಪತ್ರ ಕೊಟ್ಟಿರುವುದಿಲ್ಲ. ನಾನು ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ನೇಮಕಗೊಂಡಿದ್ದೆ. ನನ್ನ ಕೆಲಸ ಗ್ರಾಹಕರು ಬಂದಾಗ ಅವರಿಗೆ ವಾಹನಗಳ ಬಗ್ಗೆ ವಿವರಣೆ ನೀಡಿ, ವಾಹನವನ್ನು ತೋರಿಸಿ, ಅವರು ಒಪ್ಪಿದರೇ ಬುಕ್ ಮಾಡಲು ಕ್ಯಾಶ್ ಕೌಂಟರ್ ಗೆ ಕಳುಹಿಸುವ ಕೆಲಸ ಆಗಿತ್ತು. ನಾನು ಕೆಲಸ ಮಾಡುವ ಸ್ಥಳ ಮುಖ್ಯ ರಸ್ತೆಯಿಂದ ಎಂಟರ್ ಆದ ತಕ್ಷಣ ಶೋ ರೂಮ್ ನಲ್ಲಿ ಮೊದಲ ಸ್ಥಳ ನಮ್ಮದೇ ಇರುತ್ತದೆ. ನನಗೆ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ತರಬೇತಿ ನೀಡಿಲ್ಲ. ಆ ತರಬೇತಿ ನೀಡುವುದು ಇರಲಿಲ್ಲ. ಯಾವುದೇ ಒಂದು ನೇಮಕಾತಿ ಮಾಡಿಕೊಳ್ಳುವಾಗ ಅದಕ್ಕೆ ಅರ್ಹತೆ ಉಳ್ಳವರನ್ನು ನೇಮಕಾತಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನೇಮಕಾತಿಯನ್ನು ಮಾಲೀಕರು ಅಥವಾ ಅವರು ಆ ಕೆಲಸವನ್ನು ಯಾರಿಗೆ ವಹಿಸುತ್ತಾರೆ ಅವರು ಮಾತ್ರ ನೇಮಕಾತಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಎರಡನೇ ಆರೋಪಿ ಭಾಸ್ಕರ್ ರವರು ಸದರಿ ಮೋಟಾರ್ಸ್ ನ ಮಾಲೀಕರು ಆಗಿರಲಿಲ್ಲ ಮತ್ತು ನನ್ನನ್ನು ನೇಮಕಾತಿ ಮಾಡಿಕೊಳ್ಳಲು ಅಧಿಕಾರ ಹೊಂದಿರಲಿಲ್ಲ ಎಂದರೆ ಆದರೆ ನನ್ನನ್ನು ಅವರೇ ನೇಮಕಾತಿ ಮಾಡಿಕೊಂಡಿರುತ್ತಾರೆ. ನಾನು ತನಿಖೆಯ ಸಮಯದಲ್ಲಿ ನನ್ನನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ ಎಂದು ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಮ್ಯಾಕ್ಸ್ ಮೋಟಾರ್ಸ ನ ಉದ್ಯೋಗಿ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನನ್ನ ಐಡಿ ಕಾರ್ಡ್ ಅಥವಾ ನೇಮಕಾತಿ ಪತ್ರ ಕೊಟ್ಟಿಲ್ಲ. ಸೇಲ್ಸ್ ಎಕ್ಸಿಕ್ಯೂಟಿವ್ ಮಾತ್ರ ನನ್ನ ಕೆಲಸ ಆಗಿತ್ತು ಎಂದರೆ ಬ್ಯಾಂಕಿಗೂ ಸಹ ನಾನೇ ಹೋಗುತ್ತಿದ್ದೆ. ಬ್ಯಾಂಕಿಗೆ ಹೋಗಲು ನನ್ನನು ನೇಮಕಾತಿ ಮಾಡಿಕೊಂಡಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾನು ಸದರಿ ಮೋಟಾರ್ಸ್ ಉದ್ಯೋಗಿ ಅಲ್ಲ, ನಾನು ಯಾವುದೇ ಕೆಲಸ ಮಾಡಿಲ್ಲ ಮತ್ತು ಬ್ಯಾಂಕಿಗೆ ಹೋಗಿಲ್ಲ ಎಂದರೆ ಸರಿಯಲ್ಲ.

2. ಒಂದನೆ ಆರೋಪಿ ನನಗೆ ಹಣ ಕೊಡುವಾಗ ಇಷ್ಟು ಹಣ ಕೊಟ್ಟಿದ್ದೇನೆ ಎಂದು ಸಹಿ ಪಡೆಯುತ್ತಿರಲಿಲ್ಲ. ನಾನು ರೂ.3 ಲಕ್ಷ, ರೂ.4 ಲಕ್ಷ ಕೆಲವೊಂದು ಸಾರಿ ರೂ.9 ಲಕ್ಷದವರಗೂ ಹಣ ತೆಗೆದುಕೊಂಡು ಹೋಗಿ ಬ್ಯಾಂಕಿಗೆ ಜಮಾ ಮಾಡಿರುತ್ತೇನೆ. ಒಂದನೇ ಆರೋಪಿಯಾಗಲೀ ಅಥವಾ ಎರಡನೇ ಆರೋಪಿಯಾಗಲೀ ನನಗೆ ಯಾವಾತ್ತು ಆ ರೀತಿ ಹಣ ತುಂಬುವಂತೆ ಕೊಟ್ಟಿಲ್ಲ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮೀಳಾ ದಿವಾಂಜಿ ಅಂದರೆ ಚಾಸಾ-1 ರವರ ಹೆಂಡತಿ ಎಂದರೆ ಸರಿ. ಸದರಿ ಪ್ರಮೀಳಾ ದಿವಾಂಜಿ ಕ್ಯಾಶ್ ತೆಗೆದುಕೊಳ್ಳುವುದು ಮತ್ತು ಲೆಕ್ಕ ತೆಗೆದುಕೊಳ್ಳುವುದನ್ನು ಮಾಡುತ್ತಿದ್ದರು ಎಂದರೆ ಸರಿ. ಒಂದನೇ ಆರೋಪಿ ಪಾರ್ವತಿ ರವರು ಸದರಿ ಮೋಟಾರ್ಸ್ ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಆತ್ಮೀಯ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ 2009 ರಿಂದ ಪರಿಚಯ. ಚಾಸಾ-1 ರವರು ನನಗೆ ತುಂಬಾ ಆತ್ಮಿಯರಿರುತ್ತಾರೆ ಆದ್ದರಿಂದ ಅವರು ಹೇಳಿಕೊಟ್ಟ ಹಾಗೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಶ್ರೀಮತಿ. ಎಲ್ ಕೆ, ಎರಡನೇ ಆರೋಪಿ ಪರ**

ಎರಡನೇ ಆರೋಪಿ ಭಾಸ್ಕರ್ ರವರು ಯಾವುದೇ ದುರುಪಯೋಗ ಮಾಡಿಕೊಂಡಿಲ್ಲ ಎಂದರೆ ಒಂದನೇ ಆರೋಪಿ ಇಲ್ಲದೇ ಇರುವಾಗ ಎರಡನೇ ಆರೋಪಿಯೇ ಕ್ಯಾಶಿಯರ್ ಆಗಿರುತ್ತಿದ್ದರು. ಹಾಗೇ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**